# ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 219

ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 09/12/2025

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಗ್ರಾಮ ಪಂಚಾಯತಿಯಿಂದ ಪಟ್ಟಣ ಪಂಚಾಯತಿ ಮತ್ತು ಪುರಸಭೆಗೆ ಉನ್ನತೀಕರಣಗೊಂಡ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು:</td><td>ರಾಜ್ಯದ ಕಳೆದ 3 ವರ್ಷಗಳಲ್ಲಿ (2022-23, 2023-24 ಮತ್ತು 2024-25)ರಲ್ಲಿ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಗೆ ಉನ್ನತೀಕರಣಗೊಂಡ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ;<br><table><tr><th>ಕ್ರಸಂ</th><th>ಗ್ರಾಮ ಪಂಚಾಯಿತಿ ಯಿಂದ ಪಟ್ಟಣ ಪಂಚಾಯಿತಿಗೆ</th><th>ಗ್ರಾಮ ಪಂಚಾಯಿತಿ ಯಿಂದ ಪುರಸಭೆಗೆ</th></tr><tr><td>1.</td><td>8</td><td>0</td></tr></table></td></tr>
<tr><td>ಆ</td><td>ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ ಇ-ಖಾತಾದಲ್ಲಿ ನಮೂದಾಗಿರುವ ಸ್ವತ್ತುಗಳನ್ನು ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳಲ್ಲಿ ಇ-ಆಸ್ತಿಯಲ್ಲಿ ಮುಂದುವರೆಸಲು ಸರ್ಕಾರ ಕೈಗೊಂಡ ಕ್ರಮವೇನು:</td><td>ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ಮುಖಾಂತರ ಈಗಾಗಲೇ ಇ-ಸ್ವತ್ತು ತಂತ್ರಾಂಶದ ಮೂಲಕ ಸೃಜಿಸಿರುವ ಆಸ್ತಿ ದಾಖಲೆಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಇ-ಆಸ್ತಿ ತಂತ್ರಾಂಶದೊಂದಿಗೆ ಸಂಯೋಜಿಸುವಂತೆ ಪೌರಾಡಳಿತ ನಿರ್ದೇಶನಾಲಯದಿಂದ ಕ್ರ ಮ ಕೈಗೊಳ್ಳಲಾಗಿರುತ್ತದೆ.</td></tr>
<tr><td>ಇ</td><td>ಕಳೆದ 03 ವರ್ಷಗಳಲ್ಲಿ ಉನ್ನತೀಕರಣಗೊಂಡ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಸ್ವತ್ತುಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು(ವರ್ಷವಾರು ಮಾಹಿತಿ ನೀಡುವುದು)</td><td><table><tr><th>ಕಳೆದ 03 ವರ್ಷಗಳಲ್ಲಿ ಉನ್ನತೀಕರಣಗೊಂಡ ಸ್ಥಳೀಯ ಸಂಸ್ಥೆಗಳಲ್ಲಿ ಇ-ಸ್ವತ್ತಿಗಾಗಿ ಬಂದ ಅರ್ಜಿಗಳ ಸಂಖ್ಯೆ:</th><th>ವಿತರಿಸಿದ ಇ ಸ್ವತ್ತುಗಳ ಸಂಖ್ಯೆ:</th></tr><tr><td>253913</td><td>241044</td></tr></table>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 01 ರಲ್ಲಿ ನೀಡಿದೆ.</td></tr>
<tr><td>ಈ</td><td>ಸಕಾಲದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಇ-ಸ್ವತ್ತು ವಿತರಣೆಯಾಗದೇ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:ಬಂದಿದ್ದಲ್ಲಿ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮವೇನು:</td><td>ಹೌದು ಬಂದಿದೆ,<br><br>ಇ-ಖಾತಾ ಅಭಿಯಾನದ ಮೂಲಕ ಸ್ಥಳದಲ್ಲಿಯೇ ಸೂಕ್ತ ದಾಖಲೆಗಳನ್ನು ಪಡೆದುಕೊಂಡು ನಿಯಮಾನುಸಾರ ಸಕಾಲದಲ್ಲಿ ಇ-ಆಸ್ತಿ ವಿತರಿಸಲಾಗುತ್ತಿದೆ ಎಂದು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ಶಿವಮೊಗ್ಗ ಜಿಲ್ಲೆಯವರು ವರದಿಸಿರುತ್ತಾರೆ. ಮಾಹಿತಿಯನ್ನು ಅನುಬಂಧ-02 ರಲ್ಲಿ ನೀಡಿದೆ.</td></tr>
</table>

ಸಂಖ್ಯೆ:ನಅಇ 45 ಎಲ್ಸಿಕ್ಯೂ 2025

(ರಹೀಂ ಖಾನ್)

ಪೌರಾಡಳಿತ ಹಾಗೂ ಹಜ್ ಸಚಿವರು